# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

127

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ 175 ದಿನಾಂಕ: 19.11.2018

## ಸಭೆಯ ನಡಾವಳಿಗಳು

**ದಿನಾಂಕ 11.10.2018 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಎಂ.ಪ್ರತಾಪ್ : ಅಧೀಕ್ಷಕ ಇಂಜಿನಿಯರ್ (ವಿ), ಮೈಸೂರು ವೃತ್ತ.
2. ಶ್ರೀಮತಿ.ತಾರಾ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
4. ಶ್ರೀ.ಶಿವನಗೌಡ ಅಯ್ಯನಗೌಡ ಪಾಟೀಲ : ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
5. ಶ್ರೀ.ಪಿ.ಎನ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
6. ಶ್ರೀ.ವಿ.ಎಂ.ನಾಗರಾಜು : ಲೆಕ್ಕಾಧಿಕಾರಿಗಳು,ಮಡಿಕೇರಿ ವಿಭಾಗೀಯ ಕಛೇರಿ.
7. ಶ್ರೀ.ಸಿ.ಎಚ್.ಸರಸು : ಲೆಕ್ಕಾಧಿಕಾರಿಗಳು, (ಆಂ.ಲೆ.ಪ), ಮಡಿಕೇರಿ ವಿಭಾಗೀಯ ಕಛೇರಿ.
8. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
9. ಶ್ರೀ.ಹರೀಶ್.ಎಂ.ಎಸ್ : ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ
10. ಶ್ರೀ.ಭರತ್‌ಕುಮಾರ್ : ಮೆ:ಐಡಿಯಾ ಇನ್ಫಿನಿಟಿ ಐಟಿ ಸಲ್ಯುಸನ್, ಬೆಂಗಳೂರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಅಧೀಕ್ಷಕ ಇಂಜಿನಿಯರ್ (ವಿ) ರವರಾದ ಶ್ರೀ.ಎಂ.ಪ್ರತಾಪ್ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು. ದಿನಾಂಕ:10.06.2017 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಕೆ.ಎ.ಪೊಣ್ಣಪ್ಪ<br>ವಿ.ಬಾಡಗ ಗ್ರಾಮ<br>ದೂ:9449234362 | * ಬಾಡಗ ಗ್ರಾಮದಲ್ಲಿನ ಪರಿವರ್ತಕದಿಂದ ಎಲ್.ಟಿ. ಮಾರ್ಗವು ದೂರವಿದ್ದು ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿರುತ್ತಾರೆ.<br><br>* ಕುಟ್ಟಂದಿ ಗ್ರಾಮದ ಶ್ರೀ.ಕೆ.ಕೆಕುಶಾಲಪ್ಪನವರ ಮನೆಗೆ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತ ದೀನ್ ದಯಾಳು ಉಪಾಧ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಹೆಚ್ಚುವರಿ ಪರಿವರ್ತಕವು ಮಂಜೂರುಗೊಂಡಿದ್ದು ಸದರೀ ಗ್ರಾಮದಲ್ಲಿ ಈ ಯೋಜನೆಯಡಿಯಲ್ಲಿ ಪರಿವರ್ತವನ್ನು ಅಳವಡಿಸುವುದಾಗಿ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಕಾರ್ಯ ನಿರ್ವಾಹಕ ಅಭಿಯಂತರರು ಸದರಿ ಫಲಾನುಭವಿಯು ಪಂಚಾಯ್ತಿ ವತಿಯಿಂದ ಸಲ್ಲಿಸಿದ್ದ ಬಿ.ಪಿ.ಎಲ್ ಪಟ್ಟಿಯಲ್ಲಿದ್ದು ದೀನ್ ದಯಾಳು ಉಪಾಧ್ಯಾಯ |

OK

| | | | |
|---|---|---|---|
| | | | ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಸಂಪರ್ಕ ಕಲ್ಪಿಸಲಾಗುವುದು. |
| 2 | ಶ್ರೀ.ಎಂ.ಜಿ.ಪೂಣಚ್ಚ ವಿ.ಬಾಡ ಗ್ರಾಮ ದೂ.944842371 | * ಆನೆಕಾರಿಡಾರ್ ಯೋಜನೆಯು ಬಾಡಗ ಗ್ರಾಮ ವ್ಯಾಪ್ತಿಯಲ್ಲಿ ಮಂದಗತಿಯಲ್ಲಿ ಸಾಗಿದ್ದು ಹಾಗೂ ಹಲವು ಹೆಚ್ಚುವರಿ ಕಂಬಗಳನ್ನು ಒದಗಿಸುವಂತೆ ಕೋರಿದರು.<br><br>* ಎಲ್.ಇ.ಡಿ ಬಲ್ಬು ವಿತರಣೆ ಏಜೆನ್ಸಿ ವತಿಯಿಂದ ಸೂಕ್ತ ರೀತಿಯಲ್ಲಿ ಆಗದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಆನೆಕಾರಿಡಾರ್ ಯೋಜನೆಯಡಿಯಲ್ಲಿ ತೀವ್ರ ಅಪಾಯ ಮಟ್ಟದಲ್ಲಿರುವ ಮಾರ್ಗಗಳನ್ನು ಪರಿಶೀಲಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಂಭಂಧಪಟ್ಟ ಶಾಖಾಧಿಕಾರಿಯವರಿಗೆ ತಿಳಿಸುತ್ತಾ ಕೈಗೊಳ್ಳುತ್ತಿರುವ ಕಾಮಗಾರಿಯ ಮೇಲುಸ್ತವಾರಿ ಮಾಡುವಂತೆ ಸೂಚಿಸಿದರು.<br><br>* ಎಲ್.ಇ.ಡಿ ಬಲ್ಬು ವಿತರಣೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ನಮ್ಮ ಇಲಾಖಾವತಿಯಿಂದ ಯಾವುದೇ ಏಜೆನ್ಸಿಯು ಅಧಿಕೃತವಾಗಿ ನಿಯೋಜನೆಯಾಗಿಲ್ಲವಾದುದರಿಂದ ಸಂಬಂಧಿತ ಏಜೆನ್ಸಿಯವರಿಗೆ ವಾರಕ್ಕೊಮ್ಮೆ ಬಲ್ಬು ವಿತರಿಸಲು ಕ್ರಮ ಕೈಗೋಳ್ಳುವಂತೆ ಸೂಚಿಸಿದರು. |
| 3 | ಮಂದಣ್ಣ ಬಿಟ್ಟಂಗಾಲ ಗ್ರಾಮ ದೂ.9535536795 | * ಮಾಪಕ ಓದುವಿಕೆಯಲ್ಲಿ ಸುಧಾರಣೆಗೊಂಡಿದ್ದು ಬಿಟ್ಟಂಗಾಲ ಹಾಗೂ ಸುತ್ತಮುತ್ತಲಿನ ಪ್ರದೇಶಕ್ಕೆ ಪ್ರತ್ಯೇಕ ಶಾಖೆಯನ್ನು ರಚಿಸುವಂತೆ ಕೋರಿದರು.<br><br>* ಬಿಟ್ಟಂಗಾಲ ಬಾಡಗ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಸರಬರಾಜಾಗುತ್ತಿರುವ ಹೆಚ್.ಟಿ ಮಾರ್ಗವು ಹಲವು ತೋಟದ ಮುಖಾಂತರ ಹಾದು ಹೋಗಿದ್ದು ಕರಿಮೆಣಸು ಕುಯ್ಯುವ ಸಂದರ್ಭದಲ್ಲಿ ಏಣಿಯು ಮಾರ್ಗಕ್ಕೆ ತಗುಲಿವಿದ್ಯುತ್ ಅಪಘಾತವುಂಟಾಗುವ ಸಾಧ್ಯತೆಯಿರುವುದರಿಂದ ಸದರಿ ಮಾರ್ಗವನ್ನು ರಸ್ತೆಯ ಬದಿಗೆ ಸ್ಥಳಾಂತರಿಸುವಂತೆ ಕೋರಿದರು.<br><br>* ಬಾಳುಗೋಡು ಗ್ರಾಮದ ಹಲವೆಡೆ ವಿದ್ಯುತ್ ಮಾರ್ಗವು ಅಡ್ಡಾದಿಡ್ಡಿಯಾಗಿ ಎಳೆದಿದ್ದು ರಸ್ತೆಯ ಒಂದೇ ಬದಿಗೆ ಎಳೆಯುವಂತೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಪ್ರತ್ಯೇಕ ಶಾಖೆಯ ರಚನೆಗೆ ಹಲವು ಕಟ್ಟುಪಾಡುಗಳಿದ್ದು ಶಾಖಾ ರಚನೆಯು ನಿಗಮ ಕಛೇರಿ ವತಿಯಿಂದ ಮಂಜೂರಾಗಬೇಕಿದ್ದು, ಸಲ್ಲಿಸಿದ ಕಡತದ ಪ್ರಗತಿಯ ಬಗ್ಗೆ ಪರಿಶೀಲಿಸಲಾಗುವುದಾಗಿ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ಮಾರ್ಗವು ಹಲವು ವರ್ಷದ ಹಿಂದೆ ರಚಿಸಿದ್ದು ರಸ್ತೆ ಮುಖಾಂತರ ಸ್ಥಳಾಂತರಿಸಲು ಸ್ವಯಂ ನಿರ್ವಹಣಾ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗುವುದೆಂದು ತಿಳಿಸುತ್ತಾ ಸದರಿ ಪ್ರಸ್ತಾವನೆ ಸರ್ಕಾರದ ಮಾದರಿ ವಿದ್ಯುತ್ ಮಾರ್ಗ ಯೋಜನೆಯಡಿ ಒಳಗೊಂಡಿದ್ದು ಪರಿಶೀಲಿಸಲಾಗುವುದಾಗಿ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 4 | ಎಂ.ವಿ.ಚಿಣ್ಣಪ್ಪ, ರಾಮನಗರ ಗುಂಡಿಗೆರೆ ದೂ:9449933364 | * ರಾಮನಗರ ಗುಂಡಿಗೆರೆ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಇರುವ ಬಗ್ಗೆ. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸುವಂತೆ ಸೂಚಿಸಿದರು ಮುಂದುವರಿದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ದೀನ್ ದಯಾಳ್ ಉಪಧ್ಯಾಯ ಗ್ರಾಮ ವಿದ್ಯುತ್ ಯೋಜನೆಯಡಿಯಲ್ಲಿ ಹೆಚ್ಚುವರಿ ಪರಿವರ್ತಕವು ಮಂಜೂರುಗೊಂಡಿದ್ದು ಪ್ರತ್ಯೇಕ ಪರಿವರ್ತಕವನ್ನು ಅಳವಡಿಸಲಾಗುವುದು ಎಂದು ತಿಳಿಸಿದರು. |
| 5 | ಹಮೀದ್ . ರಾಮನಗರ ದೂ:9902318262 | * ಸಂಬಂಧಿತ ಶಾಖಾ ಕಛೇರಿಯಲ್ಲಿ ಸ್ಥಿರ ದೂರವಾಣಿಯನ್ನು ಸ್ವೀಕರಿಸದೇ ಇರುವ ಬಗ್ಗೆ.<br><br>* ರಾಮನಗರ ಗ್ರಾಮದಲ್ಲಿನ ಎಲ್.ಟಿ ಮಾರ್ಗವು ತೀವ್ರ ಕೆಳಮಟ್ಟದಲ್ಲಿದ್ದು ಕಂಬ ಅಳವಡಿಸುವಂತೆ ಕೇಳಿಕೊಂಡರು. | * ಇದಕ್ಕೆ ಉತ್ತರಿಸಿದ ಕಾರ್ಯ ನಿರ್ವಾಹಕ ಅಭಿಯಂತರರು (ವಿ) ರವರು ಸೇವಾ ಕೇಂದ್ರಕ್ಕೆ ಹೊಸದಾಗಿ ಮೊಬೈಲ್ ದೂರವಾಣಿಯನ್ನು ನೀಡಲಾಗಿದ್ದು ಸದರಿ ದೂರವಾಣಿಯ ಉಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |

| | | | |
|---|---|---|---|
| 6 | ಅಪ್ಪಯ್ಯ.ಕೆ.ಎಂ, ವಿಜಯನಗರ, ವಿರಾಜಪೇಟೆ<br>ದೂ:9482639681 | * ತಮ್ಮ ನಿವೇಶನದ ಹಿಂಬದಿಯಲ್ಲಿ 8 ತಿಂಗಳಿನ ಹಿಂದೆ ಅಳವಡಿಸಿರುವ 63 ಕೆ.ವಿ.ಎ ಪರಿವರ್ತಕವನ್ನು ಸ್ಥಳಾಂತರಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಈಗಾಗಲೇ ಪರಿವರ್ತಕಕ್ಕೆ ಅಳವಡಿಸಿರುವ ಎಲ್.ಟಿ ಕಿಟ್ಟನ್ನು ಸುರಕ್ಷಿತ ಅಂತರಕ್ಕೆ ಅಳವಡಿಸಲಾಗಿದ್ದು ಸದರಿ ಸ್ಥಳದಲ್ಲಿ ಪರಿವರ್ತಕವನ್ನು ಅಳವಡಿಸಲು ಬೇರೆ ಸೂಕ್ತ ಸ್ಥಳ ಲಭ್ಯವಿಲ್ಲದಿರುವುದಾಗಿ ತಿಳಿಸಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 7 | ನಂಜಪ್ಪ, ಕೊಟ್ಟೋಳಿ ಗ್ರಾಮ<br>ದೂ:9449790189 | * ತಮ್ಮ ಗ್ರಾಮಕ್ಕೆ ವಿದ್ಯುತ್ ಸರಬರಾಜಾಗುತ್ತಿರುವ ಎಫ್-4 ಬೇತ್ರಿ ಮಾರ್ಗದ ವಿಭಜನೆಗೆ ಉಪ ಕೇಂದ್ರದಲ್ಲಿ ಹೊಸದಾಗಿ ಬ್ರೇಕರ್ ಅಳವಡಿಸದೇ ಇರುವ ಬಗ್ಗೆ ಹಾಗೂ ಸದರಿ ಮಾರ್ಗಕ್ಕೆ ಜಿ.ಓ.ಎಸ್ ಗಳನ್ನು ಅಳವಡಿಸದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಜಿ.ಓ.ಎಸ್ ಹಾಗೂ ಬ್ರೇಕರ್ ಅಳವಡಿಕೆಗೆ ಈಗಾಗಲೇ ವರ್ಕ್ ಅವಾರ್ಡ್ ಆಗಿದ್ದು ಶೀಘ್ರದಲ್ಲಿ ಕಾಮಗಾರಿ ಮುಗಿಸಲಾಗುವುದಾಗಿ ತಿಳಿಸಿದರು. |
| | | * ತಮ್ಮ ಚಿಕ್ಕಪ್ಪನ ತೋಟದಲ್ಲಿನ ಎಲ್.ಟಿ ಮಾರ್ಗದ ಬದಲಾವಣೆಗೆ ಕಂಬವನ್ನು ಅಳವಡಿಸಿದ್ದು ಸದರಿ ಕಂಬಕ್ಕೆ ಬೇಕಾದಂತಹ ವಿದ್ಯುತ್ ವಾಹಕವನ್ನು ಅಳವಡಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾರ್ಗದ ಸ್ಥಳಾತರವು ಸ್ವಯಂ ನಿರ್ವಹಣಾ ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾಗಿದ್ದು ಹಾಲಿಯಿರುವ ಮಾರ್ಗ ಅಪಾಯ ಮಟ್ಟದಲ್ಲಿದ್ದರೆ ಮಧ್ಯಂತರ ಕಂಬವನ್ನು ಅಳವಡಿಸುವಂತೆ ಸಂಭಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| | | * ಮಾಪಕ ಓದುವಿಕೆ ನಿಗಧಿತ ದಿನಾಂಕದಂದು ಮಾಡದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. | * ಇದಕ್ಕೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಸ್ಥಾವರಕ್ಕೆ ದಿನಾಂಕ 9 ರಂದು ತಿಂಗಳಿನ ಬಿಲ್ಲನ್ನು ಒದಗಿಸಿರವುದಾಗಿ ತಿಳಿಸಿದರು. |
| | | * ಹಾಲಿಯಿರುವ ವಿದ್ಯುತ್ ಮಾರ್ಗದ ತಂತಿಯು ತುಂಬಾ ಹಳೆಯದಾಗಿ ಶಿಥಿಲಗೊಂಡಿದ್ದು ಸದರಿ ತಂತಿಯನ್ನು ಬದಲಾಯಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ತಮ್ಮ ವಿಭಾಗದಲ್ಲಿ ವಿದ್ಯುತ್ ಮಾರ್ಗದಲ್ಲಿನ ವಾಹಕವು ಹಳೆಯದಾಗಿರುವುದರಿಂದ ತುಂಡಾಗುವುದಿಲ್ಲ ಬದಲಾಗಿ ಗಾಳಿ ಮಳೆಯಿಂದ ಮರಗಿಡಳ ರೆಂಬೆ ಕೊಬೆಗಳು ಬೀಳುವುದರಿಂದ ತುಂಡಾಗುವುದಾಗಿ ತಿಳಿಸಿದರು. |
| 8 | ಮಂಜುನಾಥ.ಡಿ.ಎಂ, ಕಿರುಮಕ್ಕಿ<br>ದೂ:9481070567 | * ಕಿರುಮಕ್ಕಿ ಗ್ರಾಮದಲ್ಲಿ ಎಲ್.ಟಿ ಮಾರ್ಗವು ತೀವ್ರ ಕೆಳಮಟ್ಟದಲ್ಲಿದ್ದು ಕೈಗೆಟುಕುವುದಾಗಿ ತಿಳಿಸಿ ವಿದ್ಯುತ್ ತಂತಿಯನ್ನು ಎಳೆದು ಸುರಕ್ಷಿತ ಅಂತರ ಕಾಪಾಡುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಕೂಡಲೇ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 9 | ಗಣೇಶ್, ಆರ್ಜಿ ಗ್ರಾಮ<br>ದೂ:9448325658 | * ಆರ್ಜಿ ಗ್ರಾಮಕ್ಕೆ ಸರಬರಾಜಾಗುತ್ತಿರುವ ಎಫ್-2 ಗೋಣಿಕೊಪ್ಪ ಮಾರ್ಗದ ವಿಭಜನೆ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ವಿಭಜನೆ ಕಾಮಗಾರಿಯು ಈಗಾಗಲೇ ಮುಗಿದಿದ್ದು ವಿದ್ಯುತ್ ಉಪಕೇಂದ್ರದಲ್ಲಿ ಬ್ರೇಕರ್ ಅಳವಡಿಕೆಗೆ ಈಗಾಗಲೇ ವರ್ಕ್ ಅವಾರ್ಡ್ ಆಗಿದ್ದು ಶೀಘ್ರದಲ್ಲಿ ಕಾಮಗಾರಿ ಮುಗಿಸಲಾಗುವುದಾಗಿ ತಿಳಿಸಿದರು. |
| | | * ಬಿಟ್ಟಂಗಾಲ ಗ್ರಾಮಕ್ಕೆ ಹೊಸದಾಗಿ ಶಾಖಾಕಛೇರಿಯನ್ನು ಮಂಜೂರು ಮಾಡುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಪ್ರತ್ಯೇಕ ಶಾಖೆಯ ರಚನೆಗೆ ಹಲವು ಕಟ್ಟುಪಾಡುಗಳಿದ್ದು ಶಾಖಾ ರಚನೆಯು ನಿಗಮ ಕಛೇರಿ ವತಿಯಿಂದ ಮಂಜೂರಾಗಬೇಕಿದ್ದು, ಸಲ್ಲಿಸಿದ ಕಡತದ ಪ್ರಗತಿಯ ಬಗ್ಗೆ ಪರಿಶೀಲಿಸಲಾಗುವುದಾಗಿ ತಿಳಿಸಿದರು. |
| 10 | ಕಾಂಗಿರ ಬೋಪಣ್ಣ, ಪತ್ರಕರ್ತರು ವಿಜಯ ಕರ್ನಾಟಕ.<br>ದೂ:9945285212 | * ಮಡಿಕೇರಿ-ವಿರಾಜಪೇಟೆ ಮಾರ್ಗವಾಗಿ ಹೊಸದಾಗಿ 66 ಕೆ.ವಿ ಮಾರ್ಗವನ್ನು ರಚಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ಕಾಮಗಾರಿಯು ಕೆ.ಪಿ.ಟಿ.ಸಿ.ಎಲ್ ಗೆ ಸಂಭಂಧಿಸಿದ್ದು ಟೆಂಡರ್ ಪ್ರಕ್ರಿಯೆಯನ್ನು ಪರಿಶೀಲಿಸುವುದಾಗಿ ತಿಳಿಸಿದರು. |

ಮುಂದುವರಿದು ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಮುಂದಿನ ಸಭೆಯಲ್ಲಿ ಗ್ರಾಹಕರು ಹೆಚ್ಚಾದಲ್ಲಿ ಪಟ್ಟಣ ಪಂಚಾಯ್ತಿಯ ಸಭಾಂಗಣದಲ್ಲಿ ಸಭೆಯನ್ನು ನಡೆಸುವಂತೆ ತಿಳಿಸಿ ಗ್ರಾಹಕರಿಗೆ ತಿಂಗಳ ವಿದ್ಯುತ್ ಬಿಲ್ ಪಾವತಿಸಲು ಹೊಸದಾಗಿ ಅಳವಡಿಸಿರುವ ಆನ್‌ಲೈನ್ ತಂತ್ರಾಂಶದ ಬಳಕೆಯ ಬಗ್ಗೆ ಸೂಕ್ತ ಮಾಹಿತಿ ಒದಗಿಸುವಂತೆ ಸಿಬ್ಬಂದಿಗಳಿಗೆ ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಹಾಜರಿದ್ದ ಪತ್ರಕರ್ತರಿಗೆ ತಿಳಿಸುತ್ತ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

I/C [signature] 19/11/18

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.